# ಹೇ, ರಾಂಗೋ ಜುಬಾನ್

❑ ಪ್ರವ್ರಾಜಿಕಾ ಧರ್ಮಪ್ರಾಣಾ

ಅರುಣಾಚಲ ಪ್ರದೇಶದ ಬುಡಕಟ್ಟು ಜನಾಂಗಗಳ ಸ್ಥಳೀಯ ಸಾಂಸ್ಕೃತಿಕ ಬದುಕಿನ ಒಂದು ಕಿರುನೋಟವನ್ನು ನೀಡಿ ರಾಮಕೃಷ್ಣ ಶಾರದಾ ಮಿಷನ್, ಈ ಜನಾಂಗದ ಸ್ತ್ರೀಯರ ವಿದ್ಯಾಭ್ಯಾಸಕ್ಕಾಗಿ ನೀಡಿರುವ ಅಪೂರ್ವ ಕೊಡುಗೆಯನ್ನು ಚಿತ್ರಿಸಿರುವ ಪ್ರವ್ರಾಜಿಕಾ ಧರ್ಮಪ್ರಾಣಾ ಅವರು ರಾಮಕೃಷ್ಣ ಶಾರದಾ ಮಿಷನ್ನಿನ ಅರುಣಾಚಲ ಪ್ರದೇಶದ ಖೊನ್ಸಾ ಶಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

"ಹೇ ರಾಂಗೋ ಜುಬಾನ್ (ಹೇ ಪರಮಾತ್ಮ), ನಾವು ನಿನ್ನನ್ನು ಪೂಜಿಸುತ್ತಿದ್ದೇವೆ. ನೈವೇದ್ಯಗಳನ್ನು ಅರ್ಪಿಸುತ್ತಿದ್ದೇವೆ. ಇದನ್ನು ಸ್ವೀಕರಿಸಿ ತೃಪ್ತನಾಗು. ನೀನು ನಿನ್ನ ಸ್ಥಾನದಲ್ಲೇ ಇರು. ನಾವು ನಮ್ಮ ಮನೆಗಳಲ್ಲೇ ಇದ್ದು ನಿನ್ನನ್ನು ಪೂಜಿಸುತ್ತೇವೆ. ನಮ್ಮ ಹಳ್ಳಿಗೆ ಬಂದು ನಮಗೆ ಉಪದ್ರವ ನೀಡಬೇಡ. ನಮಗೆ ಚೆನ್ನಾಗಿ ಕೃಷಿಯ ಉತ್ಪಾದನೆಯನ್ನು ಕೊಡು. ನಮಗೆ ರೋಗಗಳು ಬರದಂತೆ ಮಾಡು. ಶತ್ರುಗಳಿಂದ ನಮ್ಮನ್ನು ರಕ್ಷಿಸು." ಈ ರೀತಿ ಪ್ರಾರ್ಥಿಸುತ್ತಾರೆ ಅರುಣಾಚಲದ ಟಿರಾಪ್ ಜಿಲ್ಲೆಯ ಆದಿವಾಸಿಗಳು. ಇವರಿಗೆ ದೇವಸ್ಥಾನಗಳಿಲ್ಲ, ದೇವರ ಚಿತ್ರಗಳಾಗಲೀ, ಮೂರ್ತಿಗಳಾಗಲೀ ಇಲ್ಲ, ಗುರು ಇಲ್ಲ, ಮಂತ್ರ ಇಲ್ಲ. ಆದರೆ ತಮ್ಮದೇ ಆದ ರೀತಿಯಲ್ಲಿ ದೇವರ ಕಲ್ಪನೆಯನ್ನು ಮಾಡಿ ತಮ್ಮ ಸರಳವಾದ ಹೃದಯದಿಂದ ಈ ರೀತಿ ಭಗವಂತನನ್ನು ಪ್ರಾರ್ಥಿಸುತ್ತಾರೆ. ಇವರು ಎರಡು ತರಹದಲ್ಲಿ ದೇವರನ್ನು ಕಲ್ಪಿಸುತ್ತಾರೆ. ಮೊದಲನೆಯದಾಗಿ ದೇವರು ಸಾಕಾರರೂಪದಲ್ಲಿ ಎಲ್ಲೋ ಇರುವನು, ಆ ದೇವರೊಂದಿಗೆ ಏನೂ ಸಂಪರ್ಕವಿಲ್ಲ ಎಂದು. ಎರಡನೆಯದಾಗಿ ದೇವರು ವೃಕ್ಷಗಳ ಮೇಲೆ, ನದೀತಟದಲ್ಲಿ, ಸೂರ್ಯ, ಚಂದ್ರರಲ್ಲಿ ನೆಲೆಸಿರುವನು ಎಂಬುದಾಗಿ. ಈ ದೇವರನ್ನು ಅವರು ತುಂಬ ಶ್ರದ್ಧೆಯಿಂದ ಪೂಜಿಸುತ್ತಾರೆ. ಹಿಂದೆ ವೈದಿಕ ಯುಗದಲ್ಲಿ ದೇವರನ್ನು ಈ ರೀತಿ ಸರ್ವವ್ಯಾಪಿ ಎಂದು ಆರಾಧಿಸುತ್ತಿದ್ದುದನ್ನು ಇದು ನೆನಪಿಸುತ್ತದೆ.

ಅರುಣಾಚಲ ಪ್ರದೇಶವು ಭಾರತದ ೨೮ ರಾಜ್ಯಗಳಲ್ಲಿ ಒಂದಾಗಿದೆ. ಭಾರತದ ಈಶಾನ್ಯ ಭಾಗದ ಕೊನೆಯಲ್ಲಿ, ಹಿಮಾಲಯ ಪರ್ವತರಾಶಿಗಳ ತುದಿಯಲ್ಲಿ ಇರುವ ಈ ರಾಜ್ಯವು ಗಿರಿ, ಕಾಡು, ನೀರಿನ ಝರಿಗಳಿಂದ ಕೂಡಿ ನೈಸರ್ಗಿಕವಾಗಿ ತನ್ನದೇ ಆದ ಒಂದು ಅಪೂರ್ವ ಸೌಂದರ್ಯದಿಂದ ಕೂಡಿದೆ. ಭಾರತದಲ್ಲಿ ಸೂರ್ಯನ ಉದಯವು ಇಲ್ಲಿಂದ ಆಗುವುದರಿಂದ ಈ ರಾಜ್ಯವನ್ನು ಅರುಣಾಚಲ ಎಂದು ಕರೆಯುತ್ತಾರೆ. ಆದರೆ ದೇಶದ ಉಳಿದ ಭಾಗದ ಜನರು ಈ ನಾಡಿನ ಬಗ್ಗೆ ಹೆಚ್ಚೇನೂ ತಿಳಿದಿಲ್ಲ. ಏಕೆಂದರೆ ಎಲ್ಲ ನಾಡುಗಳಂತೆ ಈ ರಾಜ್ಯದ ಐತಿಹಾಸಿಕ ಬೆಳವಣಿಗೆಯ ಯಾವ ವಿವರಗಳೂ ದೊರೆತಿಲ್ಲ. ಪರ್ವತಶಿಖರಗಳಿಂದಲೂ ಕಾಡುಗಳಿಂದಲೂ ಆವೃತವಾಗಿ ಸಮತಲ ಪ್ರದೇಶಗಳಿಂದ ಅತಿ ದೂರವಾಗಿ ಇರುವುದರಿಂದ ಈ ಭಾಗವನ್ನು Hidden Land (ಮುಚ್ಚಿದ ಪ್ರದೇಶ) ಎಂದು ಕರೆಯಲಾಗಿದೆ.

ಅನೇಕ ತರಹದ ಆದಿವಾಸಿಗಳು ಇಲ್ಲಿ ಬಹು ಕಾಲದಿಂದ ವಾಸಿಸುತ್ತಿದ್ದಾರೆ, ಅನೇಕ ತರಹದ ಭಾಷೆಗಳನ್ನು ಮಾತನಾಡುತ್ತಾರೆ. ಅಸ್ಸಾಂನ ಚರಿತ್ರೆ ಓದಿದರೆ ಇಲ್ಲಿಯ ಕೆಲವು ವಿಷಯಗಳನ್ನು ಅರಿಯಬಹುದು. ಅದಲ್ಲದೆ ಇಲ್ಲಿನ ಭಾಷೆಗೆ ತನ್ನದೇ ಲಿಪಿ ಇಲ್ಲದಿರುವುದರಿಂದ, ಇಲ್ಲಿಯ ಚರಿತ್ರೆಯನ್ನು ಯಾರೂ ಬರೆಯಲಿಲ್ಲ. ಹಾಗಾಗಿ ಇಲ್ಲಿ ಏನು ನಡೆಯಿತೆಂದು ಇಲ್ಲಿಯ ಜನರಿಗೇ ತಿಳಿಯದು. ಇದು ಟಿಬೆಟ್, ಚೀನಾ, ಬರ್ಮಾದ ಗಡಿಪ್ರದೇಶ ಆಗಿರುವುದರಿಂದ ಅಲ್ಲಿಯ ಬೌದ್ಧ ಭಿಕ್ಷುಗಳು ಒಂದು ಸಮಯದಲ್ಲಿ ಇಲ್ಲಿ ಬಂದು ತಮ್ಮ 'ತಾಯ್' (Tai) ಭಾಷೆಯಲ್ಲಿ ಬೌದ್ಧ ಸಿದ್ಧಾಂತವನ್ನು ಕಲಿಸಿದ್ದರಿಂದ ಇಲ್ಲಿಯ ಅನೇಕರು ಬೌದ್ಧರಾಗಿ ಈ ತಾಯ್ ಭಾಷೆಯನ್ನು ಅರಿತಿದ್ದಾರೆ. ವೈದಿಕ ಮತ್ತು ಪುರಾಣ ಕಾಲದಲ್ಲಿ ಭಾರತವು ಉತ್ತಮ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಂಸ್ಕೃತಿಯನ್ನು ಹೊಂದಿತ್ತು. ಆ ಸಂಸ್ಕೃತಿಯ ಕುರುಹುಗಳನ್ನು ಇಲ್ಲಿಯೂ ಕಾಣಬಹುದಾಗಿದೆ. ಮಹಾಭಾರತದಲ್ಲಿ ಇಲ್ಲಿಯ ಕೆಲವು ಸ್ಥಳಗಳ ಪರಿಚಯವಿದೆ. ಇಲ್ಲಿಯ ಜನರೇ ಕಿರಾತರೆಂದೂ, ಯಮಲರೆಂದೂ ಹೇಳಲಾಗಿದೆ. ಪ್ರಜ್ಯೋತಿಷ, ಭಗದತ್ತ ಮೊದಲಾದವರು ಕಿರಾತ ರಾಜರುಗಳಾಗಿದ್ದರು. ಇಲ್ಲಿಯ ಹಿಂದಿನ 'ಲೌಹಿತ್ಯ' ಎಂಬ ಹೆಸರಿನ ನದಿಯು ಆಮೇಲೆ ಬ್ರಹ್ಮಪುತ್ರ ಎಂದು ಕರೆಯಲ್ಪಟ್ಟಿತು. ಈಗಿನ ಲೋಹಿತ್ ಜಿಲ್ಲೆ ಹಿಂದೆ ಭೀಷ್ಮಕ ನಗರ ಅಥವಾ ಕಾಲಿಕ ದೇಶವಾಗಿತ್ತು. ಶ್ರೀಕೃಷ್ಣ ಪರಮಾತ್ಮನನ್ನು ಪತಿಯಾಗಿ ಸ್ವೀಕರಿಸಿದ ರುಕ್ಮಿಣಿಯ ತಂದೆ ಭೀಷ್ಮಕನೇ ಈ ರಾಜ್ಯದ ರಾಜನಾಗಿದ್ದ ಎಂದು ಹೇಳಲಾಗಿದೆ. ಈಗಿನ ಕಮೆಂಗ್ ಜಿಲ್ಲೆಯಲ್ಲಿ ಹಿಂದೆ ಪ್ರಸಿದ್ಧನಾದ ಬಹೂಲಕಾ ಎಂಬ ರಾಜನಿದ್ದ. ಇವನು ರಾಜ ಬಾಣನ ಮೊಮ್ಮಗನಾಗಿದ್ದ. ಅರುಣಾಚಲದ ಈಗಿನ ರಾಜಧಾನಿಯಾದ ಇಟಾನಗರದಲ್ಲಿ ಹಿಂದೆ ಒಂದು ಕಾಲದಲ್ಲಿ ಪ್ರಸಿದ್ಧರಾದ ಪಂಡಿತರಿದ್ದರೆಂದೂ, ಜಾತನಿ ರಾಜವಂಶದ ರಾಜ ರಾಮಚಂದ್ರನು ಇಲ್ಲಿನ ರಾಜನಾಗಿದ್ದ ಎಂದೂ ಹೇಳಲಾಗಿದೆ.

ಭಾರತದ ಉಳಿದ ಭಾಗಗಳಲ್ಲಿ ಇರುವಂತೆ ಇಲ್ಲಿ ತೀರ್ಥಸ್ಥಳಗಳು ಇಲ್ಲದಿದ್ದರೂ ಕೆಲವು ಸ್ಥಳಗಳ ಐತಿಹ್ಯವಿದೆ. ತೇಜು (Tezu) ಎಂಬ ಸ್ಥಳದ ಒಂದು ಕೊಳದಲ್ಲಿ ಪರಶುರಾಮನು ಸ್ನಾನ ಮಾಡಿ ತನ್ನ ಪಾಪವನ್ನು ಕಳೆದುಕೊಂಡ ಕಥೆ ಇದೆ. ಜನರು ಈ ಕೊಳವನ್ನು ದರ್ಶಿಸಿ ಇದರಲ್ಲಿ ಸ್ನಾನಮಾಡಿ ತಮ್ಮ ಪಾಪವನ್ನು ಕಳೆದುಕೊಳ್ಳಲು ಇಲ್ಲಿಗೆ ಈಗ ಭೇಟಿ ನೀಡುತ್ತಿದ್ದಾರೆ. ತಾಮ್ರೇಶ್ವರಿ ಎಂಬ ಪುರಾತನ ದೇವಸ್ಥಾನವಿದ್ದು, ಇಲ್ಲಿ ದೇವಿ ತಾಮ್ರೇಶ್ವರಿಯು ಆರಾಧ್ಯದೇವತೆಯಾಗಿದ್ದಾಳೆ. ಅಸ್ಸಾಂನಲ್ಲಿ ವೈಷ್ಣವ ಪಂಥ ಹರಡಿದ

ಸಮಯದಲ್ಲಿ ಆ ಪಂಥದ ಕೆಲವು ಪ್ರಚಾರಕರು ಅಸ್ಸಾಂನ ಹತ್ತಿರ ಇರುವ ಟಿರಾಪ್ ಮೊದಲಾದ ಸ್ಥಳಗಳಿಗೆ ಭೇಟಿ ಇತ್ತಿದ್ದರು. ಆದುದರಿಂದ ಈ ಸ್ಥಳಗಳಲ್ಲಿ ವೈಷ್ಣವರೂ ಇದ್ದಾರೆ. ಉಳಿದ ರಾಜ್ಯಗಳ ಜನಸಂಪರ್ಕದಿಂದಾಗಿ ಈಗ ಅನೇಕರು ಶಿವ, ಕೃಷ್ಣ, ಕಾಳಿ ಮೊದಲಾದ ದೇವತೆಗಳನ್ನೂ ಪೂಜಿಸುತ್ತಿದ್ದಾರೆ.

ಈ ನಾಡು ಅನ್ಯ ಸ್ಥಳಗಳಿಂದ ದೂರವಾಗಿದ್ದುದರಿಂದಲೂ, ನೈಸರ್ಗಿಕವಾಗಿ ದುರ್ಗಮ ಪ್ರದೇಶವಾಗಿದ್ದುದರಿಂದಲೂ ಇಲ್ಲಿನ ನಿವಾಸಿಗಳು ನಾಗರಿಕತೆಯ ಸೌಲಭ್ಯಗಳಿಂದ ವಂಚಿತರಾಗಿದ್ದರು. ಆದರೆ ಅವರು ತಮ್ಮದೇ ಆದ ಒಂದು ಸಂಸ್ಕೃತಿಯನ್ನು ಹೊಂದಿದ್ದರು. ಭಾರತವು ಬ್ರಿಟಿಷರ ಆಳ್ವಿಕೆಯಲ್ಲಿದ್ದಾಗ ಬ್ರಿಟಿಷರು ಈ ಭಾಗಕ್ಕೆ ಪ್ರವೇಶಿಸಲಾಗಲಿಲ್ಲ ಎಂದೇ ಹೇಳಬಹುದು. ಬ್ರಿಟಿಷರ ವಿಚಿತ್ರ ವೇಷಭೂಷಣ, ಸ್ವಭಾವ ಇವುಗಳನ್ನು ಈ ಆದಿವಾಸಿಗಳು ಮೆಚ್ಚಲಿಲ್ಲ. ಬ್ರಿಟಿಷರೊಂದಿಗೆ ಉದಾಸೀನರಾಗಿದ್ದರು. ಈ ಸ್ಥಳಗಳಲ್ಲಿ ಬೆಳೆಯುವ ಬೆಲೆಬಾಳುವ ಸಾಮಾನುಗಳಿಗೆ ಆಕರ್ಷಿತರಾದ ಬ್ರಿಟಿಷರು ಇವರೊಂದಿಗೆ ಸೌಹಾರ್ದ ಬೆಳೆಸಲು ಹೋಗಿ ವಿಫಲರಾಗಿದ್ದರು. ಈ ಆದಿವಾಸಿಗಳ ಸ್ವತಂತ್ರ ನಡವಳಿಕೆ ಕಂಡು ಅವರು ಅಸೂಯೆ ಹೊಂದಿದ್ದರು. ಹೀಗೆ ಆಗಾಗ ಬ್ರಿಟಿಷರಿಗೆ ಇವರೊಡನೆ ಕಲಹಗಳು ಉಂಟಾಗಿ ಬ್ರಿಟಿಷರ ಅನೇಕ ಮುಖ್ಯ ಅಧಿಕಾರಿಗಳನ್ನು ಇವರು ವಧಿಸಿದ್ದರೆಂದು ಹೇಳಲಾಗಿದೆ. ಮುಂದೆ ಭಾರತದಲ್ಲಿ ಅದೆಷ್ಟೋ ಧರ್ಮೋದ್ಧಾರಕರು, ಸಮಾಜೋದ್ಧಾರಕರು ಎಲ್ಲ ಕಡೆ ಸಂಚರಿಸಿದ್ದರೂ ಯಾರಿಗೂ ಈ ನಾಡಿಗೆ ಪ್ರವೇಶಿಸಲಾಗಲಿಲ್ಲ. ಸ್ವಾಮಿ ವಿವೇಕಾನಂದರು ಅಸ್ಸಾಂವರೆಗೆ ಬಂದರೂ ಈ ಸ್ಥಳಕ್ಕೆ ಪ್ರವೇಶಿಸಿರಲಿಲ್ಲ.

ಅರುಣಾಚಲದ ೧೫ ಜಿಲ್ಲೆಗಳಲ್ಲಿ ಟಿರಾಪ್ ಒಂದು. ಹಿಮಾಲಯದ ಪೂರ್ವಭಾಗದ ಕೊನೆಯಲ್ಲಿ ಹರಡಿದ ಪಾಟ್‌ಕೊಯ್ ಪರ್ವತ ಶಿಖರಗಳಿಂದ ನೀರಿನ ಝರಿಗಳು ದಕ್ಷಿಣಾಭಿಮುಖವಾಗಿ ಹರಿಯುತ್ತವೆ. ಈ ಝರಿಗಳೆಲ್ಲ ಒಂದೊಂದು ಕಡೆ ಸೇರಿ ನದಿಗಳಾಗಿವೆ. ಅವುಗಳಲ್ಲಿ ಒಂದು ನದಿ ಟಿರಾಪ್. ಇದು ಬ್ರಹ್ಮಪುತ್ರವನ್ನು ಸೇರುತ್ತದೆ. ಇದರ ಆಸುಪಾಸಿನ ಪ್ರದೇಶವೇ ಟಿರಾಪ್ ಜಿಲ್ಲೆಯಾಗಿದೆ. ಇಲ್ಲಿ ಉಳಿದ ಅನೇಕ ನದಿಗಳೂ ಇವೆ. ಗಿರಿ ಕಾಡು ಝರಿಗಳಿಂದ ಕೂಡಿದ ಈ ನಾಡು ಬರ್ಮಾ ದೇಶದ ಗಡಿಯಲ್ಲಿರುವುದರಿಂದ ಅಲ್ಲಿಯ ಜನರು ವಲಸೆ ಬಂದು ಹಿಂದಿನಿಂದಲೇ ಇಲ್ಲಿ ವಾಸವಾಗಿದ್ದಾರೆ. ಈ ನಾಡು ಸಮತಲ ನಾಡಾದ ಅಸ್ಸಾಂನ ಹತ್ತಿರವಿರುವುದರಿಂದ ಅನೇಕ ಅಸ್ಸಾಮಿಗಳು ಇಲ್ಲಿ ವಾಸವಾಗಿದ್ದಾರೆ. ಟಿರಾಪ್ ಜಿಲ್ಲೆಯನ್ನು ನವ ನಾಗರಿಕತೆ ಪ್ರವೇಶಿಸಿದ್ದರೂ ವಿದ್ಯಾಭ್ಯಾಸದ ಬೆಳಕು ಇನ್ನೂ ತಲುಪದ ಅನೇಕ ಹಳ್ಳಿಗಳು ಈಗಲೂ ಇವೆ. ಅಲ್ಲಿ ಈಗಲೂ ಜನರು ತಮ್ಮ ಹಳೆಯ ಜೀವನವನ್ನೇ ನಡೆಸುತ್ತಿದ್ದಾರೆ. ಹಿಂದಿನಿಂದಲೇ ನಡೆದು ಬರುತ್ತಿರುವ ಪದ್ಧತಿಯಂತೆ ಹಳ್ಳಿಯ ಮುಖ್ಯಸ್ಥರ ಯಜಮಾನಿಕೆಯಲ್ಲಿ ಹಳ್ಳಿಯ ಎಲ್ಲ ಚಟುವಟಿಕೆಗಳು ನಡೆಯುತ್ತವೆ. ವಯಸ್ಸಾದ ವ್ಯಕ್ತಿಗಳೇ ಈ ಮುಖ್ಯಸ್ಥರು. ಇವರಲ್ಲೇ ಒಬ್ಬ ರಾಜ. ರಾಜನನ್ನು ಹಳ್ಳಿಯ ಜನರೆಲ್ಲ ತುಂಬ ಗೌರವದಿಂದ ನೋಡುತ್ತಾರೆ. ಮನೆಮನೆಗಳಲ್ಲಿ ನಡೆಯುವ ವಿವಾಹ ಮುಂತಾದ ಕಾರ್ಯಗಳು, ಹಳ್ಳಿಯ ಉತ್ಸವಗಳು, ಜನರಲ್ಲಿ ನಡೆಯುವ ಜಗಳದ ತೀರ್ಮಾನಗಳು ಈ ರಾಜನ ಮಧ್ಯಸ್ಥಿಕೆಯಲ್ಲಿ ನಡೆಯುವುವು.

ಹಳ್ಳಿಯ ಜನರು ತಮ್ಮತಮ್ಮಲ್ಲಿ ತುಂಬ ಸ್ನೇಹಸೌಹಾರ್ದಗಳಿಂದಿದ್ದಾರೆ. ಅವರ ಎಲ್ಲ ಕಷ್ಟಸುಖಗಳನ್ನು ತಮ್ಮತಮ್ಮಲ್ಲಿ ಹಂಚಿಕೊಳ್ಳುತ್ತಾರೆ. ತುಂಬಾ ಸಿರಿವಂತಿಕೆ ಇಲ್ಲದಿದ್ದರೂ ಈ ನಾಡಿನಲ್ಲಿ ಎಲ್ಲಿಯೂ ಭಿಕ್ಷುಕರನ್ನು ಕಾಣಲಾಗುವುದಿಲ್ಲ. ಕಳ್ಳತನವೂ ಹೆಚ್ಚೇನೂ ಇಲ್ಲ. ತಮ್ಮ ಜೀವನಕ್ಕೆ ಬೇಕಾದ ಆಹಾರ ಮತ್ತು ಇತರ ಸಾಮಗ್ರಿಗಳನ್ನು ಸಾಧ್ಯವಾದಷ್ಟು ತಾವೇ ತಯಾರಿಸುತ್ತಾರೆ. ಮುಖ್ಯವಾದ ಉದ್ಯೋಗವೆಂದರೆ ಕೃಷಿ. ಅಕ್ಕಿ, ಗೆಣಸು, ಮರಗೆಣಸು, ಕೆಸುವಿನ ಗಡ್ಡೆ, ಆಲೂಗಡ್ಡೆ, ಕುಂಬಳಕಾಯಿ, ಮೆಣಸು, ಶುಂಠಿ ಮತ್ತು ವಿವಿಧ ರೀತಿಯ ಮಸಾಲೆಗಳನ್ನು ಬೆಳೆಸುತ್ತಾರೆ. ಚೆನ್ನಾಗಿ ಬಟ್ಟೆ ನೇಯುತ್ತಾರೆ. ಬಿದಿರಿನಿಂದ ಮತ್ತು ಮರದಿಂದ ಸಾಮಾನುಗಳನ್ನು ತುಂಬ ಚೆನ್ನಾಗಿ ತಯಾರಿಸುತ್ತಾರೆ. ತಮ್ಮ ಮನೆಗಳನ್ನು ತಾವೇ ನಿರ್ಮಿಸುತ್ತಾರೆ. ಮನೆಕಟ್ಟಲು ಹೆಚ್ಚಾಗಿ ಕಾಡಿನ ಮರ ಮತ್ತು ಬಿದಿರು ಓಲೆಗಳನ್ನು ಉಪಯೋಗಿಸುತ್ತಾರೆ. ನೈಸರ್ಗಿಕವಾದ ಅನಾನುಕೂಲತೆಯಿಂದಾಗಿ ಸಿಮೆಂಟ್, ಇಟ್ಟಿಗೆಗಳನ್ನು ಜಾಸ್ತಿ ಉಪಯೋಗಿಸುವುದಿಲ್ಲ. ಇವರ ಮನೆಗಳು ಬಯಲುನಾಡುಗಳ ಮನೆಗಳಿಂದ ಭಿನ್ನವಾಗಿದ್ದು ತಮ್ಮದೇ ಆದ ಸೌಂದರ್ಯದಿಂದ ಕೂಡಿರುವುವು. ತಾವೇ ನೇಯ್ದ ಬಟ್ಟೆಗಳಿಂದ ಉಡುಪುಗಳನ್ನು ತಯಾರಿಸುತ್ತಾರೆ. ಕಾಡಿನಲ್ಲಿ ಸಿಗುವ ಒಂದು ತರಹ ಮುತ್ತುಗಳಿಂದ ಆಭರಣಗಳನ್ನು ತಯಾರಿಸಿ ಮೈತುಂಬ ಅಲಂಕರಿಸಿಕೊಳ್ಳುತ್ತಾರೆ.

ಇವರ ಮುಖ್ಯ ಆಹಾರ ಅನ್ನ ಮತ್ತು ಮಾಂಸ. ಕಾಡುಗಳು ಜಾಸ್ತಿ ಇರುವುದರಿಂದ ಬೇಟೆಯ ಮೂಲಕ ಪ್ರಾಣಿಗಳು ಮತ್ತು ಪಕ್ಷಿಗಳ ಮಾಂಸ ಬೇಕಾದಷ್ಟು ಸಿಗುವುದು. ಆನೆ, ಹುಲಿ, ಚಿರತೆ ಮುಂತಾದ ಕ್ರೂರ ಮೃಗಗಳು ಕಾಡಿನ ತುಂಬ ಇವೆ. ಇವರು ಮನೆಗಳಲ್ಲಿ ಹಂದಿ ಕೋಳಿಗಳನ್ನು ಸಾಕುತ್ತಾರೆ. ಅಕ್ಕಿಯಿಂದ ಒಂದು ತರಹದ ಪಾನೀಯವನ್ನು ತಯಾರಿಸುತ್ತಾರೆ. ಇದನ್ನು ಲಾವ್ ಎಂದು ಕರೆಯುತ್ತಾರೆ. ಇದು ಒಂದು ಮಾದಕ ದ್ರವ್ಯ. ದೇವರಿಗೆ ನೈವೇದ್ಯ ಕೊಡಲೂ, ಮನರಂಜನೆಗಾಗಿ ಕುಡಿಯಲೂ ಇದನ್ನು ಉಪಯೋಗಿಸುತ್ತಾರೆ. ಕಾಡಿನಲ್ಲಿ ಸಿಗುವ ಎಲೆ ಬೇರುಗಳಿಂದ ಔಷಧಿಗಳನ್ನು ತಯಾರಿಸಿ ರೋಗ ನಿವಾರಣೆಗೆ ಉಪಯೋಗಿಸುತ್ತಾರೆ. ಈಗ ಆಧುನಿಕ ಔಷಧಿಗಳ ಸೌಕರ್ಯಗಳಿದ್ದರೂ ತಾವು ತಯಾರಿಸುವ ಔಷಧಿಗಳ ಮೇಲೆಯೇ ಸಂಪೂರ್ಣ ವಿಶ್ವಾಸ. ಮಾಟ ಮಂತ್ರಗಳಿಂದಲೂ ರೋಗ ಶಮನಗೊಳಿಸುತ್ತಾರೆ. ಹಿಂದಿನ ಕಾಲದಲ್ಲಿ ಈ ಜನರಲ್ಲಿ ವಿಚಿತ್ರವೂ, ಭಯಾನಕವೂ ಆದ ಒಂದು ಮನರಂಜನೆ ಕಾರ್ಯಕ್ರಮ ಇತ್ತು. ಒಂದು ಗ್ರಾಮಬಂದ ಇನ್ನೊಂದು ಗ್ರಾಮಕ್ಕೆ ಹೋಗಿ ಅಲ್ಲಿಯ ಮುಖ್ಯಸ್ಥರ ಅಥವಾ

ಇತರರ ತಲೆಗಳನ್ನು ಕಡಿದುಕೊಂಡು ಬಂದು ತಮ್ಮ ಗ್ರಾಮದ ಮುಖ್ಯಸ್ಥರ ಮುಂದೆ ತಲೆಯ ರಾಶಿಯನ್ನು ಹಾಕಿ ಲಾವ್ ಪಾನೀಯ ವನ್ನು ಕುಡಿದು ನರ್ತನವನ್ನು ಮಾಡಿ ಆನಂದಿಸುತ್ತಿದ್ದರು. ಯಾರು ಜಾಸ್ತಿ ತಲೆಗಳನ್ನು ಕಡಿದು ತರುತ್ತಾರೋ ಅವರನ್ನು ಪ್ರತ್ಯೇಕವಾಗಿ ಸನ್ಮಾನಿಸಲಾಗುತ್ತಿತ್ತು. ಈ ಮನರಂಜನೆ ಕಾರ್ಯಕ್ರಮವು ಸಂಪೂರ್ಣವಾಗಿ ನಿಂತಿರುವುದು ಇವರು ಈಗ ನಾಗರಿಕರಾಗುತ್ತಿರುವುದಕ್ಕೆ ಸಾಕ್ಷಿ .

ಇವರದೇ ಆದ ಸಂಸ್ಕೃತಿಯ ಉಳಿದ ಪದ್ಧತಿಗಳು ಉತ್ತಮ ವಾಗಿವೆ. ಅನೇಕ ತರಹದ ಉಳಿದ ಮನರಂಜನೆಗಳು, ಉತ್ಸವ ಗಳು ಈಗಲೂ ನಡೆಯುತ್ತವೆ. ಲಿಪಿ ಇಲ್ಲದಿದ್ದರೂ ಜೋಗುಳದ ಹಾಡಿನಿಂದ ಹಿಡಿದು ಎಲ್ಲ ತರಹದ ಹಾಡುಗಳೂ ಇವರಲ್ಲಿ ಇವೆ. ಕೃಷಿ ಮುಗಿದು ಹೊಸ ಅಕ್ಕಿ ಬರುವಾಗ ಒಂದು ಉತ್ಸವವಿದೆ. ಋತುಗಳು ಬದಲಾಗುವಾಗ ಒಂದು ಉತ್ಸವವಿದೆ. ಪ್ರಕೃತಿಯನ್ನು ವರ್ಣಿಸಿ ತಮ್ಮ ಭಾಷೆಗಳಲ್ಲಿ ಹಾಡುಗಳನ್ನು ಹಾಡಿ ವಿಶಿಷ್ಟ ರೀತಿಯ ಸುಂದರವಾದ ನರ್ತನವನ್ನು ಮಾಡುತ್ತಾರೆ. ಇದು ಸಾಮೂಹಿಕವಾಗಿ ನಡೆಯುತ್ತದೆ. ತೆರೆದ ಬಯಲಿನಲ್ಲಿ ಅಥವಾ ಹಳ್ಳಿಯ ಎಲ್ಲ ಮನೆಗಳು ಸೇರುವ ಸ್ಥಳದಲ್ಲಿ ಗಂಡಸರೂ, ಹೆಂಗಸರೂ ಸೇರಿ ಈ ನರ್ತನವನ್ನು ಮಾಡುತ್ತಾರೆ. ದೇವರ ಚಿಹ್ನೆ, ಚಿತ್ರ ಅಥವಾ ದೇವಸ್ಥಾನಗಳು ಇಲ್ಲದಿದ್ದರೂ ದಿನವೂ ದೇವರನ್ನು "ರಾಂಗೋ ಜುಬಾನ್" ಎಂದು ಕರೆದು ಪ್ರಾರ್ಥಿಸುತ್ತಾರೆ. ವರ್ಷದಲ್ಲಿ ಒಂದು ದಿನ ಸಾಮೂಹಿಕ ಆರಾಧನೆ ಇದೆ. ಎಲ್ಲ ಹಳ್ಳಿಗಳಲ್ಲಿ ಅದನ್ನು ಒಂದೊಂದು ದಿನ ಆಚರಿಸುತ್ತಾರೆ. ಮತಾಂತರಿಗಳ ಹಾವಳಿಯಿಂದ ಮತಾಂತರಗೊಂಡು ಈಗ ಕೆಲವು ಹಳ್ಳಿಗಳಲ್ಲಿ ಅವನ್ನು ನಿಲ್ಲಿಸಿದ್ದರೂ ಕೆಲವು ಹಳ್ಳಿಗಳಲ್ಲಿ ತುಂಬ ಶ್ರದ್ಧೆಯಿಂದ ಆಚರಿಸುತ್ತಾರೆ.

ಅದರ ರೀತಿ ಹೇಗೆಂದರೆ, ಉತ್ಸವದ ಹಿಂದಿನ ದಿನ ಎಲ್ಲ ಮನೆಗಳಲ್ಲಿ ಲಾವ್ ಪಾನೀಯವನ್ನು ತಯಾರಿಸಿ ರಾಜನ ಅಥವಾ ಮುಖ್ಯಸ್ಥನ ಮನೆಗೆ ಕೊಡುತ್ತಾರೆ. ಉತ್ಸವದ ದಿನ ಆ ಹಳ್ಳಿಯ ಜನರು ಹಳ್ಳಿಯಿಂದ ಹೊರಗೆ ಹೋಗುವ ಹಾಗಿಲ್ಲ. ಹೊರಗಿನಿಂದ ಯಾರೂ ಆ ಹಳ್ಳಿಗೆ ಪ್ರವೇಶಿಸಲು ಸಾಧ್ಯವಿಲ್ಲ. ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಉಪವಾಸ, ಮೌನವನ್ನು ಆಚರಿಸಿ ದೇವರನ್ನು ಚಿಂತಿಸುತ್ತಾ ಕಾಲ ಕಳೆಯುತ್ತಾರೆ. ರಾಜನೂ, ಹಳ್ಳಿಯ ಮುಖ್ಯಸ್ಥರೂ ಕೂಡಿ ಹಳ್ಳಿಯ ಮುಖ್ಯದ್ವಾರದಲ್ಲಿ ಬಿದಿರಿನಿಂದ ಒಂದು ಕಳಶವನ್ನು ತಯಾರಿಸಿ ಲಾವ್ ಪಾನೀಯವನ್ನು ಅದರಲ್ಲಿಟ್ಟು ದೇವರನ್ನು ಪ್ರಾರ್ಥಿಸುತ್ತಾರೆ. ಪ್ರಾರ್ಥನೆಯ ಅನಂತರ ಆರಾಧನೆಯ ಕೆಲವು ಪದ್ಧತಿಗಳನ್ನು ನಡೆಸಿ ಆಮೇಲೆ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುತ್ತಾರೆ. ಈಗಲೂ ಇಂತಹ ಅನೇಕ ನಿಯಮಗಳನ್ನು ಇವರು ಪಾಲಿಸುತ್ತಿದ್ದಾರೆ. ನಾಗರಿಕತೆಯು ಮುಂದುವರಿಯುತ್ತಿರುವುದರಿಂದ ಇಂತಹ ನಿಯಮಗಳಲ್ಲಿ ಅನೇಕ ವ್ಯತ್ಯಾಸಗಳೂ ಉಂಟಾಗಿವೆ. ಜನರು ಸ್ವಾಭಾವಿಕವಾಗಿ ಒರಟಾಗಿದ್ದರೂ ಕಲಾಪ್ರೇಮಿಗಳಾಗಿದ್ದಾರೆ. ಚಿತ್ರಕಲೆ, ಹಾಡು ಇವುಗಳಲ್ಲಿ ತುಂಬ ನಿಪುಣರು. ಈಗ ಟಿರಾಪ್ ಜಿಲ್ಲೆಯಲ್ಲಿ ಅರುಣಾಚಲ ಸರಕಾರವು ಅನೇಕ ತರಹದ ಆಧುನಿಕ ಸೌಲಭ್ಯಗಳನ್ನು ನೀಡುತ್ತಿದೆ. ಈ ಜಿಲ್ಲೆಯ ಮುಖ್ಯ ಪಟ್ಟಣ ಖೊನ್ಸಾ.

ಭಾರತದಾದ್ಯಂತ ಸಂಚರಿಸಿ ದೇಶದ ಜನರ ದುರವಸ್ಥೆಯನ್ನು ನೋಡಿ ಕಂಗೆಟ್ಟು ಅವರ ಉದ್ಧಾರಕ್ಕಾಗಿ ಶ್ರಮಿಸಿದ ಸ್ವಾಮಿ ವಿವೇಕಾನಂದರು ಈ ಪ್ರದೇಶಗಳಿಗೆ ಬಾರದಿದ್ದರೂ ಅವರದೇ ಪ್ರೇರಕ ಶಕ್ತಿಯಿಂದ ನಡೆಯುತ್ತಿರುವ ರಾಮಕೃಷ್ಣ ಮಿಷನ್, ರಾಮಕೃಷ್ಣ ಶಾರದಾ ಮಿಷನ್ ಮತ್ತು ವಿವೇಕಾನಂದ ಕೇಂದ್ರಗಳ ಉತ್ತಮ ಸೇವೆಯಿಂದಾಗಿ ಈ ನಾಡಿನ ಜನರು ಸಾಕಷ್ಟು ಮುಂದು ವರಿಯುತ್ತಿರುವುದು ಗಮನಾರ್ಹವಾಗಿದೆ. ವಿದ್ಯಾಭ್ಯಾಸವನ್ನೂ ಉಳಿದ ಉತ್ತಮ ಸಂಸ್ಕೃತಿಗಳನ್ನೂ ಸ್ತ್ರೀಯರಿಗೆ ಕೊಟ್ಟು ಅವರ ಮೂಲಕ ದೇಶದ ಉದ್ಧಾರವಾಗಬೇಕೆಂಬ ಸ್ವಾಮಿ ವಿವೇಕಾನಂದರ ಆದೇಶಕ್ಕೆ ಅನುಸಾರವಾಗಿ ಈ ನಾಡಿನಲ್ಲಿ ಅತ್ಯಂತ ಕೀಳು ಮಟ್ಟದಲ್ಲಿ ಜೀವಿಸುತ್ತಿದ್ದ ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ಕೊಟ್ಟು ಅವರ ಉನ್ನತಿಗಾಗಿ ರಾಮಕೃಷ್ಣ ಶಾರದಾ ಮಿಷನ್ ೩೦ ವರ್ಷ ಗಳಿಂದ ಅತ್ಯುತ್ತಮವಾಗಿ ಶ್ರಮಿಸುತ್ತಿದೆ.

ಭಾರತದ ಸ್ವಾತಂತ್ರ್ಯಾನಂತರ ದೇಶದ ಎಲ್ಲ ಭಾಗದ ಜನರು ಸಾಕಷ್ಟು ಮುಂದುವರಿಯುತ್ತಿದ್ದರೂ ಈ ನಾಡಿನ ಜನರು ಅಜ್ಞಾನ ಅಂಧಕಾರದಲ್ಲಿಯೇ ಜೀವನವನ್ನು ನಡೆಸುತ್ತಿದ್ದರು. ಭಾರತ ಸರಕಾರ ಈ ಪ್ರದೇಶಕ್ಕೆ ಅಂತಹ ಪ್ರಾಮುಖ್ಯತೆಯನ್ನು ಕೊಟ್ಟಿರಲಿಲ್ಲ. ಇಲ್ಲಿಯ ಕೆಲವು ಪ್ರಮುಖ ವ್ಯಕ್ತಿಗಳು ಈ ನಾಡಿನ ಜನರಿಗೆ ವಿದ್ಯಾಭ್ಯಾಸವನ್ನು ನೀಡಿ ಇವರ ಜೀವನವನ್ನು ಉತ್ತಮ ಗೊಳಿಸಲು ಇಲ್ಲಿ ಒಂದು ಆವಾಸಿ ಶಾಲೆಯನ್ನು ತೆರೆಯಬೇಕೆಂದು ರಾಮಕೃಷ್ಣ ಮಿಷನ್ನಿನ ಆಡಳಿತ ವರ್ಗದವರನ್ನು ಕೇಳಿಕೊಂಡರು. ಅಂತೆಯೇ ಈ ಜಿಲ್ಲೆಯ ದೇವಮಾಲಿ ಎಂಬ ಸ್ಥಳದಲ್ಲಿ ರಾಮಕೃಷ್ಣ ಮಿಷನ್ ಹುಡುಗರಿಗೋಸ್ಕರ ಶಾಲೆಯನ್ನು ತೆರೆಯಿತು. ಆದರೆ ಅಲ್ಲಿ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಸೌಕರ್ಯ ಇಲ್ಲದಿದ್ದ ಕಾರಣ ಮುಂದೆ ರಾಮಕೃಷ್ಣ ಶಾರದಾ ಮಿಷನ್ನಿನ ಹಿರಿಯ ಮಾತಾಜಿಯವರನ್ನು ಈ ಜಿಲ್ಲೆಯಲ್ಲಿ ಸ್ತ್ರೀಯರಿಗೋಸ್ಕರ ಶಾಲೆಯನ್ನು ತೆರೆಯಬೇಕೆಂದು ಕೇಳಿಕೊಳ್ಳಲಾಯಿತು. ಸ್ವಾಮಿ ವಿವೇಕಾನಂದರ ಆದರ್ಶಕ್ಕೆ ಅನುಸಾರವಾಗಿ ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ನೀಡಿ ಅವರ ಉದ್ಧಾರಕಾರ್ಯವನ್ನು ಉದ್ದೇಶವಾಗಿಟ್ಟುಕೊಂಡಿರುವ ರಾಮಕೃಷ್ಣ ಶಾರದಾ ಮಿಷನ್ ಟಿರಾಪ್ ಜಿಲ್ಲೆಯಲ್ಲಿ ಒಂದು ಶಾಲೆಯನ್ನು ತೆರೆಯಲು ನಿರ್ಧರಿಸಿತು. ಇಲ್ಲಿಯ ಮುಖ್ಯಸ್ಥರು ಖೋನ್ಸಾದಲ್ಲಿಯೇ ಈ ಶಾಲೆ ಇರಬೇಕೆಂದು ಅಭಿಪ್ರಾಯ ಪಟ್ಟರು.

ಖೋನ್ಸಾದಲ್ಲಿ ಈಗ ಸರಕಾರವು ಆಸ್ಪತ್ರೆ, ಬ್ಯಾಂಕ್, ಸಹಕಾರ ಸಂಘಗಳು, ವಾಹನಗಳು ಇತ್ಯಾದಿ ಅನೇಕ ಆಧುನಿಕ ಸೌಲಭ್ಯಗಳನ್ನು ನೀಡಿದ್ದರೂ ೩೦ ವರ್ಷಗಳ ಹಿಂದೆ ಅಲ್ಲಿ ಏನೂ ಇರಲಿಲ್ಲ. ಹತ್ತಿರದಲ್ಲಿ ಬೇರೆ ಕೇಂದ್ರಗಳೂ ಇರಲಿಲ್ಲ. ಇಂತಹ

ಅತಿ ಕಷ್ಟಕರವಾದ ಸನ್ನಿವೇಶದಲ್ಲಿ ರಾಮಕೃಷ್ಣ ಶಾರದಾ ಮಿಷನ್ನಿನ ಹಿರಿಯ ಸಂನ್ಯಾಸಿನಿಯರು ಸೇವೆ ಸಲ್ಲಿಸುವ ಗಂಭೀರ ಸವಾಲನ್ನು ಸ್ವೀಕರಿಸಿದರು. ಖೋನ್ಸಾ ಗ್ರಾಮದ ಮುಖ್ಯಸ್ಥರು ತಮ್ಮ ಹಳ್ಳಿಯಲ್ಲಿ ೩೦.೮೮ ಎಕರೆಗಳಷ್ಟು ಜಾಗವನ್ನು ಮಿಷನ್ನಿಗೆ ದಾನ ಮಾಡಿದರು. ನಮಸಂಗ್ ಬರ್ದೂರಿಯೂ ಗ್ರಾಮದ ಮುಖ್ಯಸ್ಥರು ಹಣಸಹಾಯವನ್ನು ನೀಡಿದರು. ೧೯೭೩ ಫೆಬ್ರವರಿ ೧೭ನೇ ತಾರೀಖಿನಂದು ಶಾರದಾ ಮಿಷನ್ ಒಂದು ಚಿಕ್ಕ ಸರಕಾರಿ ಕಟ್ಟಡದಲ್ಲಿ ಪ್ರಾಥಮಿಕ ಶಾಲೆಯನ್ನು ಶುರುಮಾಡಿತು. ದಾನವಾಗಿ ಸಿಕ್ಕಿರುವ ಸ್ಥಳದಲ್ಲಿ ಶಾಲೆ, ಹಾಸ್ಟೆಲ್, ಪಾಕಶಾಲೆ, ಊಟದ ಮನೆ, ಶ್ರೀರಾಮಕೃಷ್ಣ, ಶ್ರೀಶಾರದಾದೇವಿ, ಸ್ವಾಮಿ ವಿವೇಕಾನಂದರ ಭಾವ ಚಿತ್ರಗಳನ್ನು ಪ್ರತಿಷ್ಠಾಪಿಸಲು ಒಂದು ಚಿಕ್ಕ ಮಂದಿರ, ಸಂನ್ಯಾಸಿನಿಯರಿಗೂ ಉಳಿದ ಉಪಾಧ್ಯಾಯಿನಿಯರಿಗೂ ವಾಸಿಸಲು ಬೇಕಾದ ಕಟ್ಟಡ– ಇವುಗಳನ್ನು ನಿರ್ಮಿಸಿದ ಮೇಲೆ, ೧೯೭೪ ಜನವರಿ ೨೮ರಲ್ಲಿ ನರ್ಸರಿಯಿಂದ ೧೨ನೇ ತರಗತಿವರೆಗಿನ ಶಾಲೆಯನ್ನು ತೆರೆಯಲಾಯಿತು. ಅನೇಕ ಅನಾನುಕೂಲತೆಗಳಿಂದಾಗಿ ನರ್ಸರಿ, ಮತ್ತು ೧೧ ಮತ್ತು ೧೨ ನೆ ತರಗತಿಗಳನ್ನು ಈಗ ನಡೆಸಲಾಗುತ್ತಿಲ್ಲ. ಶಾಲೆಯನ್ನು ತೆರೆದ ಆರಂಭದ ದಿನಗಳಲ್ಲಿ ಸಂನ್ಯಾಸಿನಿಯರೂ ಬ್ರಹ್ಮಚಾರಿಣಿಯರೂ ಅಧ್ಯಾಪಕಿಯರೂ ಉಳಿದ ಸಿಬ್ಬಂದಿವರ್ಗದವರೂ ಬೇಕಾದಷ್ಟು ಕಷ್ಟಗಳನ್ನು ಅನುಭವಿಸಬೇಕಾಗಿ ಬಂತು. ಇಲ್ಲಿಯ ಹೆಣ್ಣು ಮಕ್ಕಳು ಅದೆಷ್ಟು ಒರಟಾಗಿದ್ದರೆಂದರೆ ಅವರನ್ನು ಕಾಡು ಕುಸುಮಗಳೆಂದೇ ಹೇಳಬಹುದಾಗಿತ್ತು. ಅವರಿಗೆ ನಾಗರಿಕ ಜೀವನದಲ್ಲಿ ತರಬೇತಿಯನ್ನು ಕೊಟ್ಟು, ಒಂದು ಶಿಸ್ತಿನ ಜೀವನಕ್ರಮವನ್ನು ಅನುಸರಿಸುವಂತೆ ಮಾಡುವುದು ಅತ್ಯಂತ ಕಠಿಣವಾದ ಕೆಲಸವಾಗಿತ್ತು. ಎಷ್ಟೋ ವರ್ಷಗಳಿಂದ ಹಳ್ಳಿಯ ಒಳಗೇ ಇದ್ದು ನಾಗರಿಕತೆಯ ಯಾವುದನ್ನೂ ಅರಿಯದೆ ತಮ್ಮದೇ ಆದ ಸಂಸ್ಕೃತಿಯಲ್ಲಿ ಬೆಳೆದು ನಾಗರಿಕತೆಯ ಜೀವನವನ್ನು ಸ್ವೀಕರಿಸಬೇಕಾದರೆ ಇಲ್ಲಿಯ ಹೆಣ್ಣುಮಕ್ಕಳಿಗೂ ತುಂಬ ಕಷ್ಟವೇ ಆಯಿತು. ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ನೀಡಿದರೆ ಅವರು ಆದಷ್ಟು ಬೇಗ ತಮ್ಮನ್ನು ಸುಧಾರಿಸಿಕೊಳ್ಳುವುದಲ್ಲದೆ ದೇಶದ ಉದ್ಧಾರವನ್ನೂ ಮಾಡಲು ಸಾಧ್ಯ ಎಂದು ಸ್ವಾಮಿ ವಿವೇಕಾನಂದರು ಹೇಳಿದ ಮಾತಿನ ಸತ್ಯವನ್ನು ಇಲ್ಲಿ ಕಾಣುವಂತಾಯಿತು.

ವಿದ್ಯಾರ್ಥಿನಿಯರಿಗೆ ಚರಿತ್ರೆ, ಭೂಗೋಳ, ವಿಜ್ಞಾನ, ಸಾಹಿತ್ಯ ಮೊದಲಾದುವುಗಳಲ್ಲಿ ಉತ್ತಮ ಶಿಕ್ಷಣವನ್ನು ಇಲ್ಲಿ ಕೊಡಲಾಗುತ್ತಿದೆ. ಅಂತೆಯೇ ಹಾಡು, ನೃತ್ಯ, ನಾಟಕ, ಚಿತ್ರಕಲೆ ಮೊದಲಾದುವುಗಳಲ್ಲಿಯೂ ತರಬೇತಿಯನ್ನು ನೀಡಲಾಗುತ್ತಿದೆ. ಈ ನಾಡಿನ ಸಂಸ್ಕೃತಿಯ ಉತ್ತಮ ಅಂಶಗಳನ್ನು ಪುಷ್ಟಿಗೊಳಿಸಿ ಅದನ್ನು ಮುಂದುವರಿಸಲೂ ಅವರಿಗೆ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಸ್ವಂತ ಭಾಷೆಗಳ ಲಿಪಿ ಇಲ್ಲದುದರಿಂದ, ಅನ್ಯ ರಾಜ್ಯಗಳ ಜನರೊಂದಿಗೆ ಸಂಪರ್ಕಿಸಲು ಸಹಾಯಕವಾಗಲು ಇಂಗ್ಲಿಷ್ ಮಾಧ್ಯಮದಲ್ಲಿ ವಿದ್ಯಾಭ್ಯಾಸವನ್ನು ನೀಡಲಾಗುತ್ತಿದೆ. C.B.S.E.ಯ ಪಠ್ಯಕ್ರಮದಲ್ಲಿ ಪಾಠ ನಡೆಯುತ್ತಿದ್ದು ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಇಲ್ಲಿಯ ಅನೇಕ ವಿದ್ಯಾರ್ಥಿನಿಯರು ಡಾಕ್ಟರ್, ಇಂಜಿನಿಯರ್, ಬ್ಯಾಂಕಿನ ಅಧಿಕಾರಿಗಳು ಮೊದಲಾದ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಈ ನಾಡಿನಲ್ಲಿ ಪುರುಷರಿಗಿಂತ ಸ್ತ್ರೀಯರೇ ಬುದ್ಧಿಶಾಲಿಗಳೂ, ಉತ್ತಮ ಕೆಲಸಗಾರರೂ ಆಗಿದ್ದಾರೆ. ಒಂದು ಮನೆಯ ಅಥವಾ ಒಂದು ಹಳ್ಳಿಯ ಉದ್ಧಾರಕ್ಕಾಗಿ ಪುರುಷರಿಗಿಂತ ಸ್ತ್ರೀಯರೇ ಜಾಸ್ತಿ ದುಡಿಯುತ್ತಿದ್ದಾರೆ. ಇಲ್ಲಿ ವಿದ್ಯಾಭ್ಯಾಸವನ್ನೂ, ಉತ್ತಮ ಸಂಸ್ಕೃತಿಯನ್ನೂ ಪಡೆದ ಅನೇಕ ವಿದ್ಯಾರ್ಥಿನಿಯರು ಈಗ ಸ್ವಂತ ನಾಡಿನ ಹಿಂದುಳಿದ ಸ್ಥಳದಲ್ಲಿ ಜನರ ಏಳಿಗೆಗೆ ಶ್ರಮಿಸುತ್ತಿದ್ದಾರೆ. ನಾಡಿನ ಹೊರಗೂ ಅನೇಕ ಸ್ಥಳಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಶಾರದಾ ಮಿಷನ್ನಿನ ಈ ವಿದ್ಯಾಕೇಂದ್ರವು ಇಲ್ಲಿಯ ಸ್ತ್ರೀಯರಿಗೆ ಒಂದು ವರದಾನವಾಗಿದೆ. ಇಲ್ಲಿ ವಿದ್ಯಾಭ್ಯಾಸವನ್ನು ಪಡೆದು ಹೊರಗೆ ಹೋದ ವಿದ್ಯಾರ್ಥಿನಿಯರು ತಮ್ಮ ಜೀವನದಲ್ಲಿ ಉನ್ನತ ಸ್ಥಾನಗಳಲ್ಲಿದ್ದು ಮಿಷನ್ನಿನ ಜೊತೆಯಲ್ಲಿ ಈಗಲೂ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ, ಮಾತ್ರವಲ್ಲ, ತಮ್ಮ ಏಳಿಗೆಗೆ ಕಾರಣರಾದ, ಅವರಿಗೆ ತರಬೇತಿಯನ್ನು ನೀಡಲು ಅತ್ಯಂತ ಶ್ರಮ ವಹಿಸಿದ ಸಂನ್ಯಾಸಿನಿ ಬ್ರಹ್ಮಚಾರಿಣಿಯರು ಹಾಗೂ ಉಳಿದ ಅಧ್ಯಾಪಕಿಯರೊಂದಿಗೆ ಕೃತಜ್ಞತೆಯಿಂದ ಸ್ನೇಹ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ವಿದ್ಯಾಭ್ಯಾಸದಿಂದ ವಂಚಿತರಾಗಿದ್ದ ಇಲ್ಲಿನ ಸ್ತ್ರೀಯರಿಗೆ ಬಾಳಿನಲ್ಲಿ ಜ್ಞಾನದ ಬೆಳಕನ್ನು ನೀಡಿದ ರಾಮಕೃಷ್ಣ ಶಾರದಾ ಮಿಷನ್ ೩೦ ವರ್ಷಗಳ ತನ್ನ ಸೇವೆಯಿಂದ ಕೃತಾರ್ಥವಾಗಿದೆ. ಸ್ವಾಮಿ ವಿವೇಕಾನಂದರ ಆದೇಶವನ್ನು ಪಾಲಿಸಿ ಧನ್ಯವಾಗಿದೆ. ಈ ವಿದ್ಯಾಸಂಸ್ಥೆ ಈಗ ಟಿರಾಪ್ ಜಿಲ್ಲೆಯ ಸ್ತ್ರೀಯರಿಗೆ ಮಾತ್ರವಲ್ಲ, ಅರುಣಾಚಲದ ಉಳಿದ ಅನೇಕ ಜಿಲ್ಲೆಯ ವಿದ್ಯಾರ್ಥಿನಿಯರಿಗೂ ಇಲ್ಲಿ ವಿದ್ಯಾಭ್ಯಾಸವನ್ನು ಪಡೆಯಲು ಸೌಕರ್ಯ ನೀಡಿದೆ. ಅಂತೆಯೇ ಅರುಣಾಚಲದ ಅನೇಕ ಕುಗ್ರಾಮದ ಮಕ್ಕಳೂ ಅರುಣಾಚಲದ ಮಂತ್ರಿಗಳು, ಶಾಸಕರು ಮೊದಲಾದ ನಾಗರಿಕರ ಮಕ್ಕಳೂ ಈ ವಿದ್ಯಾಸಂಸ್ಥೆಯಲ್ಲಿ ಕಲಿಯುವುದಕ್ಕೆ ಬಂದಿರುತ್ತಾರೆ. ಈ ರಾಮಕೃಷ್ಣ ಶಾರದಾ ಮಿಷನ್ನಿನ ಹೆಣ್ಣುಮಕ್ಕಳ ವಿದ್ಯಾಕೇಂದ್ರವು ಅರುಣಾಚಲದಲ್ಲಿರುವ ಅತ್ಯುತ್ತಮವಾದ ಹಾಗೂ ಮಾದರಿಯ ವಿದ್ಯಾಕೇಂದ್ರವೆಂದೇ ಹೇಳಬಹುದು. ಕಾಲವು ಉರುಳಿದಂತೆಲ್ಲ ಇಲ್ಲಿಯ ಜನರೂ ನಾಗರಿಕರಾಗುತ್ತಿದ್ದಾರೆ. ಈಗ ಇವರು ದೇಶದ ಎಲ್ಲ ಕಡೆಯ ವಿದ್ಯಾರ್ಥಿನಿಯರಂತೆಯೇ ಉತ್ತಮ ವಿದ್ಯಾರ್ಥಿನಿಯರಾಗಿ ನಿಂತಿದ್ದಾರೆ. ದೇಶದ ಮುಖ್ಯವಾಹಿನಿಯಲ್ಲಿ ಒಂದಾಗಿದ್ದಾರೆ.

ಆದರೆ ಇವರ ಜೀವನದಲ್ಲಿ ಈಗ ಬೇರೆ ರೀತಿಯ ಸಮಸ್ಯೆಗಳು ಉದ್ಭವಿಸಿವೆ. ರಾಜಕೀಯ ಸಮಸ್ಯೆಗಳಿಂದ ಇವರ ಶಾಂತ ಜೀವನಕ್ಕೆ ಭಂಗವಾಗುತ್ತಿದೆ. ಯಾವ ನಿರ್ದಿಷ್ಟ ಮತಧರ್ಮವೂ ಇಲ್ಲದ ಈ ನಾಡಿನ ಜನರು ಮತಾಂತರವನ್ನೇ ಉದ್ಯಮ ಮಾಡಿಕೊಂಡಿರುವ ಅನ್ಯಮತಗಳ ಹಾವಳಿಯಿಂದ ಅಶಾಂತರಾಗುತ್ತಿದ್ದಾರೆ. ನಾಗರಿಕತೆಯನ್ನು ಕಲಿಸುವ ಹೆಸರಿನಲ್ಲಿ ಇವರಿಗೆ ಅಧಿಕಾರದ, ಐಶ್ವರ್ಯದ ಲೋಭವನ್ನು ತೋರಿಸಿ ಬಲಾತ್ಕಾರವಾಗಿ ಇವರನ್ನು

ಅನ್ಯ ಮತಾವಲಂಬಿಗಳನ್ನಾಗಿ ಮಾಡುತ್ತಿದ್ದಾರೆ. ಇದರಿಂದ ಈ ನಾಡಿನಲ್ಲಿ ಎಲ್ಲ ಕಡೆ ಆತಂಕ, ಭಯ, ಅಶಾಂತಿ ಹರಡುತ್ತಿವೆ. ಒಂದು ಕಡೆ ಅನ್ಯಮತಗಳ ಹಾವಳಿ, ಇನ್ನೊಂದು ಕಡೆ ರಾಜಕೀಯ ಸಮಸ್ಯೆಗಳು. ಇಲ್ಲಿಯ ವಿದ್ಯಾವಂತರನ್ನು ಈ ಸಮಸ್ಯೆಗಳು ಬಾಧಿಸುತ್ತಿದ್ದರೂ ಅವರು ಏನೂ ಮಾಡಲಾರದವರಾಗಿದ್ದಾರೆ. ಆದರೆ ವಿದ್ಯಾಭ್ಯಾಸವೂ ಇಲ್ಲದ, ರಾಜಕೀಯ ಏನೆಂದು ಅರಿಯದ ಮುಗ್ಧ ಬಡಜನರು ತಮ್ಮ ಮೇಲೆ ನಡೆಯುತ್ತಿರುವ ಅತ್ಯಾಚಾರಗಳಿಂದ ಕಂಗೆಟ್ಟು, ಭಯದಿಂದಲೂ, ಆತಂಕದಿಂದಲೂ ದಿನಗಳನ್ನು ಕಳೆಯುತ್ತಿದ್ದಾರೆ. ಈ ಬಡಜೀವಿಗಳ ಮೊರೆಯನ್ನು ಯಾರು ಕೇಳಬಲ್ಲರು? ಭಾರತದ ಉಳಿದ ಭಾಗದಲ್ಲಿರುವ ಜನತೆ ಈ ಸ್ಥಳದ ನಿವಾಸಿಗಳು ಕಷ್ಟಪಡುವುದನ್ನು ಹೇಗೆ ಅರಿಯಬಲ್ಲರು? ಈ ನಾಡಿನ ಈಗಿನ ಪರಿಸ್ಥಿತಿ ನಿಜವಾಗಿಯೂ ದುಃಖಕರವಾಗಿದೆ. ಪರಂಪಾರನುಗತವಾಗಿ ಇವರು ಆರಾಧಿಸುತ್ತಿರುವ ದೇವರನ್ನು ಬಿಟ್ಟು, ಉಳಿದ ದೇವರನ್ನು ಕರೆಯಲು ಇವರಿಗೆ ಬಲಾತ್ಕಾರವಾದ ತರಬೇತಿಯನ್ನು ನೀಡಲಾಗುತ್ತಿದೆ. ಆದರೆ ಏನೂ ಅರಿಯದ ಈ ಜನರನ್ನು ಬಲಾತ್ಕಾರವಾಗಿ ಅನ್ಯಮತೀಯರ ಪೂಜಾಪದ್ಧತಿಯನ್ನು ಆಚರಿಸುವಂತೆ ಮಾಡಿದರೂ ತಮ್ಮ ಹೃದಯಾಂತರಾಳದ ಮನಸ್ಸಿನ ವೇದನೆಯನ್ನು ಸಹಿಸಲಾಗದೆ ದಿನಾ ಹೀಗೆ ಪ್ರಾರ್ಥಿಸುತ್ತಿದ್ದಾರೆ: "ಹೇ ರಾಂಗೋ ಜುಬಾನ್, ನಮ್ಮನ್ನು ಈ ಸಮಸ್ಯೆಗಳಿಂದ ಪಾರುಮಾಡು. ನಮ್ಮನ್ನು ರಕ್ಷಿಸು. ನಮಗೆ ಶಾಂತಿಯನ್ನು ಕೊಡು."

ಈ ಸರಳ ಜೀವಿಗಳ ಪ್ರಾರ್ಥನೆಯೊಂದಿಗೆ ಭಾರತದ ಉಳಿದ ಎಲ್ಲ ನಾಡಿನ ಜನರೂ ಧ್ವನಿ ಸೇರಿಸಿ ಪ್ರಾರ್ಥಿಸುವಂತಾಗಲಿ. ಇವರ ಸಮಸ್ಯೆಗಳನ್ನು ಅರಿತು ಅದನ್ನು ಬಗೆಹರಿಸಲು ಸಹಾಯ ಮಾಡಲಿ.

*[The Noetis* By Parul Dutta and *Arunachal Through The Ages* By J.N. Chowdhury ಈ ಎರಡು ಗ್ರಂಥಗಳ ಸಹಾಯದಿಂದಲೂ, ಇಲ್ಲಿಯ ರಾಮಕೃಷ್ಣ ಶಾರದಾ ಮಿಷನ್ನಿನ ಸಂಪರ್ಕವಿದ್ದ ಈ ನಾಡಿನ ಕೆಲವು ವ್ಯಕ್ತಿಗಳ ಅನುಭವವನ್ನೂ ಆಧರಿಸಿ ಈ ಲೇಖನವನ್ನು ಬರೆಯಲಾಗಿದೆ.]

ವಿ ಪ್ರ

## ಪ್ರಹಸನ ಪ್ರಸಂಗ

ಸಂತಾ ಸಿಂಗನು ವಿದ್ಯುತ್ ಗರಗಸದಿಂದ ಮರವನ್ನು ಕತ್ತರಿಸುತ್ತಿದ್ದನು. ಅಚಾತುರ್ಯದಿಂದ ಅವನ ಹತ್ತೂ ಬೆರಳುಗಳು ಕತ್ತರಿಸಲ್ಪಟ್ಟವು. ಅವನು ಕೂಡಲೇ ಡಾಕ್ಟರ ಹತ್ತಿರ ಓಡಿದನು.

ಡಾಕ್ಟರ್ : "ನಿನ್ನ ಬೆರಳುಗಳನ್ನು ಕೊಡು. ಪ್ರಯತ್ನಿಸಿ ನೋಡುತ್ತೇನೆ."

ಸಂತ ಸಿಂಗ್ : "ಬೆರಳುಗಳೇ ಇಲ್ಲ ಡಾಕ್ಟ್ರೇ. ಅದಕ್ಕೇ ನಿಮ್ಮ ಹತ್ರ ಬಂದದ್ದು."

ಡಾಕ್ಟರ್ : "ಬೆರಳುಗಳೇ ಇಲ್ಲ ಅಂದ್ರೆ ಹೇಗಯ್ಯ! ನೀನು ಅವುಗಳನ್ನು ತರಬೇಕಾಗಿತ್ತು! ಮೈಕ್ರೋಸರ್ಜರಿ ಮಾಡಿ ಅವುಗಳನ್ನು ಜೋಡಿಸಬಹುದಿತ್ತು!"

ಸಂತಾ ಸಿಂಗ್ : "ಆದರೆ ಡಾಕ್ಟ್ರೇ, ಅವುಗಳನ್ನು ನಾನು ಹೇಗೆ ಹೆಕ್ಕಿಕೊಂಡು ಬರುವುದು?"

**ಮನಸ್ಸು ಹಸ್ತವಿದ್ದಂತೆ, ಬೆರಳುಗಳೇ ದಶೇಂದ್ರಿಯಗಳು. ಬೆರಳುಗಳಿಲ್ಲದೆ ವಸ್ತುಗಳನ್ನು ಗ್ರಹಿಸಲು ಆಗದಿರುವಂತೆ ಇಂದ್ರಿಯಗಳ ಸಹಾಯವಿಲ್ಲದೆ ಮನಸ್ಸು ವಿಷಯಗ್ರಹಣ ಮಾಡಲಾರದು.**

❖ ❖ ❖

ಒಬ್ಬ ವ್ಯಕ್ತಿ ನೇತ್ರಚಿಕಿತ್ಸಕನ ಬಳಿಗೆ ಹೋದನು. ವೈದ್ಯನು ಅವನ ಕಣ್ಣನ್ನು ಪರೀಕ್ಷಿಸಿ ಅವನಿಗೊಂದು ಕನ್ನಡಕವನ್ನು ಕೊಟ್ಟನು. ಆ ವ್ಯಕ್ತಿ ವೈದ್ಯನನ್ನು ಕೇಳಿದ, "ಡಾಕ್ಟ್ರೇ, ಈ ಕನ್ನಡಕ ಹಾಕಿಕೊಂಡರೆ ನಾನು ಓದಬಹುದಲ್ಲವೆ?"

"ಖಂಡಿತ. ನಿಮಗೆ ಓದಲು ಸಾಧ್ಯವಾಗಲೇ ಬೇಕು" , ವೈದ್ಯನು ಭರವಸೆಯಿಂದ ನುಡಿದ.

"ಆಹಾ! ಎಂಥ ಭಾಗ್ಯ! ನಾನು ಓದಲು ಕಲಿಯಬಲ್ಲೆ ಎಂದೇ ಎಣಿಸಿರಲಿಲ್ಲ" ಆ ವ್ಯಕ್ತಿ ಆನಂದಾಶ್ಚರ್ಯದಿಂದ ನುಡಿದ.

**ಹೀಗೆಯೇ ನಾವು ಬಾಹ್ಯ ಪರಿಕರಗಳಿಂದ ಹೆಚ್ಚು ಸುಖವನ್ನು ಅಥವಾ ಜ್ಞಾನವನ್ನು ಪಡೆಯಬಹುದೆಂದು ಭ್ರಮಿಸುತ್ತೇವೆ. ಆಂತರಿಕ ತಿಳಿವಳಿಕೆ ಇಲ್ಲದಿದ್ದರೆ ಹೊರಗಿನ ಪರಿಕರಗಳಿಂದ ಯಾವ ಜ್ಞಾನವನ್ನೂ ಪಡೆಯಲಾಗುವುದಿಲ್ಲ. ಕೇವಲ ಬಾಹ್ಯ ಪರಿಕರಗಳ ವೃದ್ಧಿಯಿಂದ ಜ್ಞಾನವೃದ್ಧಿಯಾಗುವುದಿಲ್ಲ. ಹಾಗೆಯೇ ಬಾಹ್ಯ ಸುಖಸಾಧನಗಳಿಂದ ಸುಖ ವೃದ್ಧಿಸುವುದಿಲ್ಲ.**

❖ ❖ ❖

ರೋಗಿ : "ಡಾಕ್ಟ್ರೇ, ನಾನು ಈ ರೋಗದಿಂದ ಗುಣವಾಗುವ ಸಾಧ್ಯತೆ ಎಷ್ಟಿದೆ?"

ವೈದ್ಯ : "ನೂರಕ್ಕೆ ನೂರು ಗುಣವಾಗುವ ಛಾನ್ಸ್ ಇದೆ."

ರೋಗಿ : "ಹೌದೇ !"

ವೈದ್ಯ : "ಖಂಡಿತ! ವೈದ್ಯಕೀಯ ವರದಿಯ ಪ್ರಕಾರ ಈ ರೋಗಕ್ಕೆ ಒಳಗಾದವರಲ್ಲಿ ಹತ್ತಕ್ಕೆ ಒಂಬತ್ತು ಜನ ಸಾಯುತ್ತಾರೆ. ನಾನು ಚಿಕಿತ್ಸೆ ಮಾಡಿದವರ ಪೈಕಿ ನೀವು ಹತ್ತನೆಯವರು, ಉಳಿದ ಒಂಬತ್ತು ಜನರು ಆಗಲೆ ಮೃತಪಟ್ಟಿದ್ದಾರೆ."

**ಈ ಪ್ರಪಂಚದಲ್ಲಿ ಅನೇಕರು ಅನೇಕ ಬಗೆಯ ಭರವಸೆಗಳನ್ನು ನೀಡುತ್ತಾರೆ. ರಾಜಕಾರಣಿಗಳು ದಕ್ಷ ಆಡಳಿತದ ಭರವಸೆಯನ್ನು ನೀಡುತ್ತಾರೆ, ವೈದ್ಯರು ಉತ್ತಮ ಆರೋಗ್ಯದ ಭರವಸೆಯನ್ನು ನೀಡುತ್ತಾರೆ, ಆರ್ಥಿಕ ಸಂಸ್ಥೆಗಳು ನೆಮ್ಮದಿಯ ಭವಿಷ್ಯದ ಭರವಸೆಯನ್ನು ನೀಡುತ್ತವೆ. ಆದರೆ ಈ ಎಲ್ಲ ಭರವಸೆಗಳೂ ಹುಸಿ. ಆಧ್ಯಾತ್ಮಿಕ ಜೀವನದಲ್ಲೇ ನಿಜವಾದ ಭರವಸೆ ಇರುವುದು.**

ವಿ ಪ್ರ